† ಶ್ರೀ ವೈ. ರಾಮಕೃಷ್ಣ.—ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅವನ್ನು ಎರಡು ಸಾರಿ ರಿಪೇರಿ ಮಾಡಿದೆ. ಅವು ಒಂದೊಂದು ವಾರ ಕೆಲಸಮಾಡಿ ಪುನಃ ನಿಂತುಹೋಗುತ್ತಾ ಇರುತ್ತಿದ್ದುವು. ಮೂರರ ಪೈಕಿ ಒಂದು ಕೆಲಸ ಮಾಡುವುದಕ್ಕೆ ಆಗುವುದೇ ಇಲ್ಲವೆಂದು ರಿಸ್ ಮ್ಯಾಂಟರ್ ಮಾಡಿದೆ. ಇನ್ನೊಂದು ಎರಡು ವರ್ಷಗಳವರೆಗೂ ಕೆಲಸ ಮಾಡಿದೆ. ಮತ್ತೊಂದಕ್ಕೆ ಸ್ಪೇರ್ ಪಾರ್ಟ್ಸ್ ಬೇಕಾಗಿದೆ. ಇವೆಲ್ಲವನ್ನೂ ರಿಪೇರಿ ಮಾಡಲು ಲಂಡನ್ನಿನ ಜನರಲ್ ಎರೆಕ್ಟಿಕ್ ಕಂಪೆನಿಗೆ ಆರ್ಡರ್ ಪ್ಲೇಸ್ ಮಾಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಕೆ ಎಂ.ಸಿ. ದೊಡ್ಡ ಆಸ್ಪತ್ರೆಯಲ್ಲಿ ಇರತಕ್ಕ ಕೆಲವು ಎಕ್ಸ್‌ರೇ ಯಂತ್ರಗಳು ಕೆಟ್ಟುಹೋಗಿ ಜನಗಳಿಗೆ ಬಹಳ ತೊಂದರೆಯಾಗಿರುವುದರಿಂದ ಹೊಸ ಯಂತ್ರಗಳನ್ನು ತರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಈಗ ಅಲ್ಲಿರುವ ಮೂರು ಯಂತ್ರಗಳೂ ಹೊಸದಾಗಿವೆ. ಆದ್ದರಿಂದ ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡದ ಕಡೆಗಳಲ್ಲಿ ಫಿಲಂಸ್ ಬಹಳ ಕಡಿಮೆ ಇವೆ. ಎಷ್ಟು ಹಣವನ್ನು ಫಿಲಂಗಳಿಗಾಗಿ ಖರ್ಚುಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಪುಟ್ಟಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ ನಿಮ್ಮ ಇಲಾಖೆಯವರು ಒದಗಿಸಿರತಕ್ಕ ಅಂಕಿಅಂಶಗಳ ಪ್ರಕಾರ 1968 ನೇ ಇಸವಿಗಿಂತ 1967 ನೇ ಇಸವಿಯಲ್ಲಿ ಹೆಚ್ಚಿಗೆ ಮೇಜರ್ ಆಪರೇಷನ್ಸ್ ಆಗಿವೆ. ಪ್ರತಿಯೊಂದು ಆಪರೇಷನ್ನಿಗೆ ಎಕ್ಸ್‌ರೇ ಫಿಲಂಸ್ ಬೇಕಾಗುತ್ತದೆ. ಆದ ಮೇಲೆ 1968 ನೇ ಇಸವಿಯಲ್ಲಿ ನೀವು ಈ ಆಸ್ಪತ್ರೆಗೆ ಒದಗಿಸಿರುವ ಎಕ್ಸ್‌ರೇ ಫಿಲಂಗಳು ಎಷ್ಟು ?

ಶ್ರೀ ವೈ. ರಾಮಕೃಷ್ಣ.—ಅದಕ್ಕೆ ನೋಟೀಸ್ ಬೇಕು.

Academic Status of Different Colleges

222. **Sri B. P. GANGADHAR** (Tumkur).—

Will Minister for Education be pleased to state:—

(*a*) whether there is any difference in Academic status as between the Government College and the Yuvaraja College, Maharaja College and College of Engineering and if so, the nature of difference;

(*b*) whether under the University Grants Commission scheme, any revision of salary was given effect to in the Government College of the State during the III Plan period;

(*c*) whether there is any disparity in the scales of pay and allowances of the teaching staff as between the Government Colleges and and the Yuvaraja's College and Maharaja's College;

(*d*) the reasons for denying the same revised scales under the University Grants Commission Scheme to the Government Colleges;

(*e*) whether such a revision of salary was given effect to in the Graduate Colleges of Mysore University, the Central College, Bangalore University during the III Plan period?

(*f*) whether the University Grants Commission scales of pay was given effect to in the Government Colleges according to the Original terms and offer of the University Grants Commission or any modifications

are made by the Government in the pay revision order; if so, the modifications made;

(*g*) whether Government intend to give effect to any revision in salary to the Government College Teachers?

A.—Sri N. M. KOTRABASAIAH SOGI (Deputy Minister for Education).—

(*a*) The exact meaning of the term "Academic Status" cannot be defined. All Colleges are represented on the Academic Council of the Universities. The coures conducted vary from College to College. The two Government Colleges. *viz*., the Law College, Bangalore and the V. H. D. Home Science Institute conduct Post-Graduate courses. All other Government Colleges conduct P. U. C. and Degree Courses. The University College of Engineering, Bangalore conducts B. E. and M. E. Courses. The Yuvaraj's and Maharaja's Colleges conduct P. U. C. and Degree Courses.

(*b*) No.

(*c*) Yes.

(*d*) The University Grants Commission Scheme does not envisage such scales for Affiliated Colleges.

(*e*) No. Only in Central College, Bangalore University.

The III Plan scale was introduced in Maharaja's and Yuvaraja's Colleges after 1966.

(*f*) With certain modification as shown in the statement. (Copy of the modifications made is placed on the Table of the House).

(*g*) No.

Sri B. P. GANGADHAR.—Supplementary to (*d*): Is it not desirable to maintain an uniform standard of scales for all colleges whether it is recommended by the University Grants Commission or not?

† Sri N. M. KOTRABASAIAH SOGI.—In Colleges like the Maharaja's College and the Yuvaraja College the University has got full control. They are autonomous bodies and the Government cannot inferfere in their administration. So far as the colleges under the administration of the Government are concerned, there is a uniform scale of pay.

Sri B. P. GANGADHAR.—May I know what are the courses in which post-graduate instructions are given in the V. H. D. College of Home Science?

Sri N. M. KOTRABASAIAH SOGI.—I want notice.

Sri S. S. SHETTAR.—May I know whether there are certain colleges like M. S. Ramaiah Engineering College over the management of which the University has no control and is it a fact that the management is reterenching staff like anything and the University is not giving any relief to such persons?

Sri N. M. KOTRABASAIAH SOGI.—The Government cannot interfere in the administration of these colleges. It is for the University to consider that.

ಶ್ರೀ ಎನ್. ಎ. ಜನ್ನೇಗೌಡ.—ಮೈಸೂರು ಎಮೆನ್ ಕಾಲೇಜಿನಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಹೋಂ ಸೈನ್ಸ್ ಅಭ್ಯಾಸಮಾಡುವಂಥ ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶವನ್ನು ಮಾಡಿಕೊಡುತ್ತೀರಾ ?

Mr. SPEAKER.—It is beyond the scope of the question.

ಶ್ರೀ ಬಿ. ಪಿ. ಗಂಗಾಧರ್.—ಎ. ಎಚ್. ಡಿ. ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಏನಾದರೂ ಪ್ರಿನ್ಸಿಪಲ್‌ಗಳು ಇವೆಯೇ, ಹಾಗೇನಾದರೂ ಪ್ರಿನ್ಸಿಪಲ್‌ಗಳು ಇದ್ದರೆ ಅವು ಯಾವುವು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಯೂನಿವರ್ಸಿಟಿ ಕಾಲೇಜಿನಲ್ಲಿ ಕೆಲಸಮಾಡತಕ್ಕ ಸ್ಟಾಫ್ ಅರ್ಹತೆ, ಮತ್ತು ಸರ್ಕಾರಿ ಕಾಲೇಜಿನಲ್ಲಿ ಕೆಲಸಮಾಡತಕ್ಕ ಸ್ಟಾಫ್ ಅರ್ಹತೆ ಒಂದೇ ಆಗಿದ್ದು, ವಿದ್ಯಾರ್ಥಿಗಳಿಗೆ ಸಿಲಬಸ್ ಒಂದೇ ಆಗಿದ್ದು, ಪರೀಕ್ಷೆ ಕೂಡ ಒಂದೇ ಆಗಿದ್ದರೂ ಕೂಡ ಸಂಬಳ ಮತ್ತು ಅಲೋಯನ್ಸ್ ಬಗ್ಗೆ ವ್ಯತ್ಯಾಸ ಇದೆ, ಇದರಿಂದ ಕೆಟ್ಟ ಪರಿಣಾಮವಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯೂನಿವರ್ಸಿಟಿ ಕಾಲೇಜಿನಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸಿನಲ್ಲಿ ರಿಸರ್ಚ್ ವರ್ಕ್ ಮಾಡುವ ಕೆಲಸ ಇರುವುದರಿಂದ ಅವರಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರು ಮನಸ್ಸು ಮಾಡಿದ್ದಾರೆ. ಸರ್ಕಾರಿ ಕಾಲೇಜಿನಲ್ಲಿ ಡಿಗ್ರಿಕೋರ್ಸ್ ಇದೆ. ಅಲ್ಲಿ ರಿಸರ್ಚ್ ವರ್ಕ್ ಯಾವುದೂ ಇಲ್ಲದೇ ಇರುವುದರಿಂದ ವ್ಯತ್ಯಾಸ ಕಂಡುಬರುತ್ತದೆ ಎಂದು ಕಾಣುತ್ತದೆ.

Bus Stand at Sindhanoor

223. Sri AMARE GOUDA (Sindhanoor).—

Will the Minister for Transport be pleased to state :—

whether land has been acquired for construction of a Bus Stand at Sindhanoor; if so, the reason for not starting the construction work ?

A.—Sri H. C. BORAIAH (Deputy Minister for Transport).—

Land has been acquired and possession has been given on 30th March 1968. Preparation of plans and estimates are under progress.

Sri AMARE GOUDA.—When the actual work is likely to be started ;

ಶ್ರೀ ಎಚ್. ಸಿ. ಬೋರಯ್ಯ.—ಆ ಬಸ್ ನಿರ್ಮಾಣದ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸರಾಗುತ್ತಿದೆ. ಇದಕ್ಕಾಗಿ 10 ಸಾವಿರ ರೂಪಾಯಿಗಳನ್ನು ಒದಗಿಸಿಕೊಂಡಿದ್ದೇವೆ, 1968-69ನೇ ಸಾಲಿನಲ್ಲಿ ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಇದರಲ್ಲಿ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರಿಸರಾಗುತ್ತಿದೆ ಎಂದು ಹೇಳಿದ್ದೀರಿ, ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಎಷ್ಟು ಹಣ ಬೇಕು, ಆ ಕಟ್ಟಡಕ್ಕೆ ಎಷ್ಟು ಹಣ ಎನ್ನತಕ್ಕ ಯಾವುದೇ ಎಸ್ಟಿಮೇಟು ಮತ್ತು ಪ್ಲಾನು ಇಲ್ಲದೆ ಈಗ ಭೂಮಿಯನ್ನು ಅಕ್ವೈರ್ ಮಾಡಿದ್ದೀರಾ, ಆ ರೀತಿ ಮೊದಲೇ ಪ್ಲಾನು ಮತ್ತು ಎಸ್ಟಿಮೇಟು ಮಾಡದೇ ಇದ್ದರೆ ಮುಂದೆ ತೊಂದರೆಯಾಗುವುದಿಲ್ಲವೇ ?